ಮಂಗಳೂರು ಬ್ರಿಟಿಷರ ಕೈವಶವಾಯಿತು. ನಂತರ ಕರಾವಳಿ ಭಾಗದಲ್ಲಿ ಅಲ್ಲಲ್ಲಿ ಪ್ರತಿರೋಧ ವ್ಯಕ್ತವಾಗುತ್ತಿದ್ದರೂ, ಬ್ರಿಟಿಷರ ಸೈನ್ಯಬಲ ಅದನ್ನು ಹೊಸಕಿ ಹಾಕುತ್ತಿತ್ತು. ಕರಾವಳಿಯಲ್ಲಿ ಬೆಳೆದ ಬೆಳೆಯ ಮಾರಾಟ ವ್ಯವಸ್ಥೆ, ತೆರಿಗೆ ವ್ಯವಸ್ಥೆಗಳನ್ನು ಇನ್ನಷ್ಟು ಕ್ಲಿಷ್ಟಗೊಳಿಸಿ ಬ್ರಿಟಿಷರು ಹಿಂಸೆ ನೀಡುತ್ತಿದ್ದುದರಿಂದ, 1811ರಲ್ಲಿ ರೈತರು ಅಸಹಕಾರ ಚಳವಳಿ ನಡೆಸಲಾರಂಭಿಸಿದರು. ಈ ಚಿಕ್ಕಪುಟ್ಟ ಪ್ರತಿರೋಧಕ್ಕೆ ಬ್ರಿಟಿಷರು ಸೊಪ್ಪು ಹಾಕದೇ ಇದ್ದಾಗ ರೋಸಿದ ರೈತರು ಮತ್ತು ಜಮೀನ್ದಾರಿ ಮುಖಂಡರು ಸಶಸ್ತ್ರ ಹೋರಾಟ ಮಾಡಲು ನಿರ್ಧರಿಸಿ, 1837ರಲ್ಲಿ ಹೋರಾಟಕ್ಕೆ ಸಜ್ಜಾದರು. ಕೊಡಗಿನ ಹಾಲೇರಿ ವಂಶದ ಚಿಕ್ಕವೀರರಾಜೇಂದ್ರ ದೊರೆಯ ವಿರುದ್ಧ ವಿನಾಕಾರಣ ಆರೋಪ ಹೊರಿಸಿ, ಆತನನ್ನು ಬ್ರಿಟಿಷರು ಗಡೀಪಾರು ಮಾಡಿದ ನೆಪದಲ್ಲಿ ಈ ಕಿಡಿ ಹತ್ತಿಕೊಂಡಿತು.



ಸುಳ್ಯದ ಬೆಳ್ಳಾರೆಯಲ್ಲಿನ ಬ್ರಿಟಿಷರ ಖಜಾನೆ ಕಟ್ಟಡ

ಸುಳ್ಯ ಉಬರಡ್ಕ ಗ್ರಾಮದ ಕೆದಂಬಾಡಿ ರಾಮಯ್ಯ ಗೌಡ ಎಂಬ ಜಮೀನ್ದಾರರ ಮಾರ್ಗದರ್ಶನದಲ್ಲಿ ಹೋರಾಟದ ರೂಪುರೇಷೆ ಸಿದ್ಧಗೊಂಡಿತು. ಕೊಡಗಿನ ಶನಿವಾರ ಸಂತೆ ಹೆಮ್ಮನೆಯ ಪುಟ್ಟಬಸಪ್ಪ ಎಂಬ ಯುವಕನಿಗೆ ಕಲ್ಯಾಣಸ್ವಾಮಿ ಎಂದು ನಾಮಕರಣ ಮಾಡಿ, ಆತನನ್ನು ಹಾಲೇರಿಯ ರಾಜವಂಶಸ್ಥ ಎಂದು ಪ್ರಚಾರಗೊಳಿಸಿ, ಯುವಕರಿಗೆ ಹೋರಾಟದ ತರಬೇತಿ ನೀಡಲಾಯಿತು. ಎಲ್ಲ ತಯಾರಿಯೊಂದಿಗೆ 1837ರ ಮಾರ್ಚ್ 30ರಂದು ಸುಮಾರು ಎರಡು ಸಾವಿರ ಮಂದಿ ಹೋರಾಟಗಾರರ ಸೇನೆ ಬೆಳ್ಳಾರೆಯಲ್ಲಿರುವ ಬ್ರಿಟಿಷ್ ಖಜಾನೆಯ ಮೇಲೆ ದಾಳಿ ಮಾಡುವುದರೊಂದಿಗೆ ಕ್ರಾಂತಿಯ ಕಿಡಿ ಹೊತ್ತಿಕೊಂಡಿತು.

ನಂತರ ಈ ಸೇನೆಯು ಪೆರಾಜೆ, ಸುಳ್ಯ, ಸುಬ್ರಹ್ಮಣ್ಯ, ಮಂಜ್ರಾಬಾದ್, ಬಿಸಲೆಯಲ್ಲಿ ಆಡಳಿತವರ್ಗದ ವಿರುದ್ಧ ಸಿಡಿದೇಳುವಂತೆ ಸ್ವಾತಂತ್ರ್ಯ ಪ್ರೇಮಿಗಳಿಗೆ ಸಂದೇಶ ಬಿತ್ತರಿಸಿತು. ದೈವದ ಛತ್ರಚಾಮರವನ್ನು ಹಿಡಿದು, ರಾಜಾಶ್ವದಲ್ಲಿ ಕಲ್ಯಾಣಸ್ವಾಮಿಯನ್ನು ಕುಳ್ಳಿರಿಸಿಕೊಂಡ ಸೇನೆ ಮಂಗಳೂರು ಕಡೆಗೆ ಹೊರಟಿತು. ಬೆಳ್ಳಾರೆಯಲ್ಲಿದ್ದ ಬ್ರಿಟಿಷ್ ಖಜಾನೆಯನ್ನು ವಶಪಡಿಸಿಕೊಂಡಿದ್ದು ಮಾತ್ರವಲ್ಲದೆ, ಬ್ರಿಟಿಷ್ ಆಡಳಿತ ಪರ ಕೆಲಸ ಮಾಡುತ್ತಿದ್ದ ಸಿಬ್ಬಂದಿಯನ್ನು ಸೆರೆಹಿಡಿಯಲಾಯಿತು.

ಸೇನೆಯನ್ನು ನಾಲ್ಕು ವಿಭಾಗ ಮಾಡಿ ಹೋರಾಟ ಮುಂದುವರೆಯಿತು. ಒಂದು ದಳ ಕುಂಬ್ಳೆ ಕಾಸರಗೋಡು ಮಂಜೇಶ್ವರವನ್ನು ಗೆದ್ದರೆ, ಮತ್ತೊಂದು ದಳ ಬಂಟ್ವಾಳ ಮತ್ತು ಕಾರ್ಕಳವನ್ನು ವಶಪಡಿಸಿಕೊಂಡಿತು. ಮೂರನೇ ತಂಡವು ಉಪ್ಪಿನಂಗಡಿ ಬಿಸಲೆ ಐಗೂರು ಪ್ರದೇಶವನ್ನು ಗೆಲ್ಲುತ್ತದೆ. ಕಲ್ಯಾಣಸ್ವಾಮಿ, ರಾಮಯ್ಯ ಗೌಡ, ಗುಡ್ಡೆಮನೆ ಅಪ್ಪಯ್ಯ ಗೌಡ ಮತ್ತು ಕುಕ್ಕುನೂರು ಚೆನ್ನಯ್ಯ ಅವರಿದ್ದ ಪ್ರಧಾನ ಸೈನ್ಯವು ಮಂಗಳೂರಿಗೆ ತೆರಳುತ್ತದೆ. ಇಷ್ಟರಲ್ಲಿ ಕ್ರಾಂತಿಯ ಸುದ್ದಿ ತಿಳಿದ ಕೆನರಾ ಜಿಲ್ಲೆಯ ಕಲೆಕ್ಟರ್ ಲೆವಿನ್, ಸೇನಾ ತುಕಡಿಯೊಂದಿಗೆ ಪುತ್ತೂರಿಗೆ ಬಂದು ಅಲ್ಲಿಯೇ ಕಲ್ಯಾಣಸ್ವಾಮಿ ತಂಡವನ್ನು ಎದುರಿಸುತ್ತಾನೆ. ಆದರೆ ಗೆಲುವು ಹೋರಾಟಗಾರರ ಪಾಲಿಗಾಯಿತು. ಹೋರಾಟದ ತೀವ್ರತೆಯನ್ನು ಅರಿತ ಲೆವಿನ್ ಮಂಗಳೂರನ್ನು ರಕ್ಷಿಸಲು ಮುಂದಾದರೂ, ಸ್ಥಳೀಯರು ಅವನಿಗೆ ಸಹಕಾರ ನೀಡಲಿಲ್ಲ. ನಗರ ಕಾವಲುಪಡೆಯೇ ಹೋರಾಟಗಾರರ ಪರ ನಿಂತಿತು. ಅಷ್ಟರಲ್ಲಿ ಬ್ರಿಟಿಷರು ನಗರದಲ್ಲಿದ್ದ ಯೂರೋಪಿಯನ್ ಕುಟುಂಬಗಳನ್ನು ರಕ್ಷಿಸಲು ಮುಂದಾದರು.

ಇತ್ತ ಹೋರಾಟಗಾರರಿಗೆ ಅಪಾರ ಬೆಂಬಲ ವ್ಯಕ್ತವಾಗುತ್ತದೆ. ಬಂಗಾಡಿ ಅರಸು ಮನೆತನದ ಲಕ್ಷ್ಮಪ್ಪ ಬಂಗರಸ, ಧರ್ಮಸ್ಥಳದ ಧರ್ಮಾಧಿಕಾರಿ ಮಂಜಯ್ಯ ಹೆಗ್ಗಡೆ ಮುಂತಾದ ಧನಿಕರು ಹೋರಾಟಕ್ಕೆ ಸಂಪತ್ತು, ಜನಬಲ ಒದಗಿಸುತ್ತಾರೆ. ಹೀಗೆ ಮೂರೂ ದಿಕ್ಕಿನಲ್ಲಿ ಜಯಗಳಿಸಿದ ಹೋರಾಟಗಾರರ ಮೂರು ತಂಡಗಳು ಮಂಗಳೂರಿನಲ್ಲಿ ಪ್ರಧಾನ ತಂಡವನ್ನು ಸೇರಿಕೊಳ್ಳುತ್ತವೆ. 10ರಿಂದ 12 ಸಾವಿರದಷ್ಟು ಜನರು ಹೋರಾಟದ ಪ್ರವಾಹದಲ್ಲಿ ಸೇರಿಕೊಳ್ಳುತ್ತಾರೆ. ಮಂಗಳೂರು ತಲುಪಿದ ಯೋಧರು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಏಳು ಧ್ವಜಗಳನ್ನು ಕೆಳಕ್ಕಿಳಿಸಿ, ಹಾಲೇರಿ ರಾಜಲಾಂಛನದ ಬಾವುಟ ಹಾರಿಸುತ್ತಾರೆ. ಈ ಬಾವುಟ ಹಾರಿದ ಜಾಗವೇ ಇಂದಿನ ಬಾವುಟ ಗುಡ್ಡೆ. ಬ್ರಿಟಿಷರ ನ್ಯಾಯವ್ಯವಸ್ಥೆಯನ್ನು ಸುಟ್ಟು ವಿನಾಕಾರಣ ಜೈಲಿನಲ್ಲಿದ್ದ ಸ್ವದೇಶಿಯರನ್ನು ಬಿಡುಗಡೆ ಮಾಡಲಾಗುತ್ತದೆ. ಸ್ವಾತಂತ್ರ್ಯದ ಧ್ವಜ ಹಾರಿದ ಜಾಗದಲ್ಲಿ ಇತ್ತೀಚೆಗೆ ಕ್ರಾಂತಿಯ ರೂವಾರಿ ಕೆದಂಬಾಡಿ ರಾಮಯ್ಯ ಗೌಡ ಅವರ ಪ್ರತಿಮೆ ಸ್ಥಾಪಿಸಲಾಗಿದೆ.

ಓಡಿಹೋದ ಕಲೆಕ್ಟರ್ ಸುಮ್ಮನಿರುತ್ತಾನೆಯೇ? ಮಂಗಳೂರಿನ ಸಹಾಯಕ್ಕೆ ಮುಂಬೈನಿಂದ ಸೈನ್ಯ, ಮದ್ದುಗುಂಡುಗಳನ್ನು ತರಿಸಿಕೊಳ್ಳಲಾಯಿತು. ಧಾರವಾಡ, ಬೆಳಗಾವಿಯಿಂದ ಸೈನ್ಯ ಮಂಗಳೂರಿಗೆ ಬಂತು. ಕೆನರಾ ಸೈನ್ಯಗಳ ನಾಯಕ ಬ್ರಿಗೇಡಿಯರ್ ಅಲನ್, ಕರ್ನಲ್ ಗ್ರೀನ್ ನಾಯಕತ್ವದಲ್ಲಿ ಸೈನ್ಯವನ್ನು ಮಂಗಳೂರಿಗೆ ಕಳುಹಿಸಿದ. ಮುಂಬೈ ಕಡೆಯಿಂದಲೂ ಸೈನ್ಯ ಬಂತು. ಬ್ರಿಟಿಷರ ಸುಸಜ್ಜಿತ ಸೇನೆಗೂ ರೈತಸೈನ್ಯಕ್ಕೂ ಕಾಳಗ ನಡೆಯಿತು. ಹೋರಾಟಕ್ಕೆ ಸಂಬಂಧಿಸಿದಂತೆ ಒಟ್ಟು 1115 ಜನರನ್ನು ಬಂಧಿಸಲಾಗಿತ್ತು. ಕೆದಂಬಾಡಿ ರಾಮಯ್ಯ ಗೌಡ, ಅವರ ಮಗ ಸಣ್ಣಯ್ಯ ಗೌಡ, ಚೆಟ್ಟಿ ಕುಡಿಯ, ಕುಕ್ಕುನೂರು ಚೆನ್ನಯ್ಯ, ಕೂಜುಗೋಡು ಮಲ್ಲಪ್ಪ ಗೌಡ, ಬೀರಣ್ಣ ಬಂಟ, ಕಾರ್ಯಕಾರ ಸುಬೇದಾರ್ ಕೃಷ್ಣಯ್ಯ, ಗುಡ್ಡೆಮನೆ ತಮ್ಮಯ್ಯ ಮೊದಲಾದವರನ್ನು ಪ್ರಾಣಿಗಳಂತೆ ಬೋನಿನಲ್ಲಿ ತುಂಬಿಸಿ ಸಿಂಗಪುರ, ಬರ್ಮಾ ಮುಂತಾದ ಸಮುದ್ರದಾಚೆಗಿನ ಊರುಗಳಿಗೆ ಸಾಗಹಾಕಿ, ಜೀವನದುದ್ದಕ್ಕೂ ಕೈಕಾಲುಗಳಿಗೆ ಕೋಳ ತೊಡಿಸಿ ಇರಿಸಲಾಯಿತು. ಶಿಕ್ಷೆಯಿಂದ ನಲುಗಿ ಅವರು ಸಾವನ್ನಪ್ಪಿದಾಗ ಅವರ ಶವವೂ ದೊರಕದಂತೆ ನೋಡಿಕೊಳ್ಳಲಾಯಿತು.

ಪುಟ್ಟಬಸಪ್ಪನನ್ನು ಆತನ ಊರಾದ ಹೆಮ್ಮನೆಯಲ್ಲಿ ಸೆರೆಹಿಡಿದರೆ, ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಮಡಿಕೇರಿಯಲ್ಲಿ ಬಂಧಿಸಲಾಯಿತು. ಉಪ್ಪಿನಂಗಡಿ ಮಂಜ ಮತ್ತು ಲಕ್ಷ್ಮಪ್ಪ ಬಂಗರಸ ಮಂಗಳೂರಿನಲ್ಲಿ ಬಂಧಿಸಲ್ಪಟ್ಟರು. ಶಿವಮೊಗ್ಗದ ನಗರ ಪ್ರಾಂತದ ಹೋರಾಟಗಾರರ ಬೆಂಬಲದಿಂದ ಮತ್ತೆ ಸೈನ್ಯವನ್ನು ಸಂಘಟಿಸಲು ಹೊರಟಿದ್ದ ಕೆದಂಬಾಡಿ ರಾಮಯ್ಯ ಗೌಡರನ್ನು ಕಾರ್ಕಳದ ಸಮೀಪ ಕಬ್ಬಿನಾಲೆಯಲ್ಲಿ ಸೆರೆಹಿಡಿಯಲಾಯಿತು.

1837ರ ಹೋರಾಟದಲ್ಲಿ ಭಾಗವಹಿಸಿದ ಗುಡ್ಡೆಮನೆ ಅಪ್ಪಯ್ಯ ಗೌಡರನ್ನು ಅದೇ ವರ್ಷ ಅಕ್ಟೋಬರ್ 31ರಂದು ಮಡಿಕೇರಿ ಕೋಟೆಯೊಳಗೆ ನೇಣುಗಂಬಕ್ಕೆ ಏರಿಸಲಾಯಿತು. ಲಕ್ಷ್ಮಪ್ಪ ಬಂಗರಸನನ್ನು 1837ರ ಮೇ 23ರಂದು, ಉಪ್ಪಿನಂಗಡಿಯ ಮಂಜನನ್ನು ಮೇ 30 ರಂದು ಮತ್ತು ಕಲ್ಯಾಣಸ್ವಾಮಿ ಎಂಬ ಹೆಸರಿನ ಪುಟ್ಟಬಸಪ್ಪನನ್ನು ಜೂನ್ 19ರಂದು ಮಂಗಳೂರಿನ ಬಿಕರ್ನಕಟ್ಟೆಯಲ್ಲಿ ಗಲ್ಲಿಗೇರಿಸಲಾಯಿತು. ಅವರ ಮೃತದೇಹಗಳು ಗಲ್ಲುಗಂಬದ ಮೇಲೆಯೇ ಇರುವಂತೆ ನೋಡಿಕೊಂಡಿದ್ದರಿಂದ, ಹಲವು ದಿನಗಳ ಕಾಲ ಆ ಬೀಭತ್ಸ ದೃಶ್ಯವು ಜನರಲ್ಲಿ ಭಯವನ್ನು ಮೂಡಿಸಿತ್ತು. ಆ ಜಾಗವೇ 'ಭೀಕರ ರಣಕಟ್ಟೆ'.

ಈ ಹೋರಾಟದಲ್ಲಿ ಭಾಗವಹಿಸಿದ್ದ ಕೂಜುಗೋಡು ಕಟ್ಟೆಮನೆ ಅಪ್ಪಯ್ಯ ಗೌಡ ಅವರ ಮನೆತನಕ್ಕೆ ಸೇರಿದ್ದ ಅನಿಂದಿತ್ ಗೌಡ ಕೊಚ್ಚಿ ಬಾರಿಕೆ ಪ್ರಸ್ತುತ 'ಅಮರ ಸುಳ್ಯ ಹೆರಿಟೇಜ್ ಫೌಂಡೇಶನ್' ಆರಂಭಿಸಿದ್ದು, ವಸಾಹತುಶಾಹಿ ಆಡಳಿತದ ಸಂದರ್ಭದಲ್ಲಿ ಮಾನವ ಹಕ್ಕುಗಳ ದಮನ ನಡೆದ ಘಟನೆಗಳ ದಾಖಲೀಕರಣ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಸ್ವಾತಂತ್ರ್ಯ ಪಡೆಯುವುದಕ್ಕೆ ನಮ್ಮ ಹಿರಿಯರು ಮಾಡಿದ ತ್ಯಾಗ, ಶ್ರಮದ ನೆನಪುಗಳು ಅಳಿಯಬಾರದು ಎಂಬುದು ಈ ಫೌಂಡೇಶನ್‌ನ ಆಶಯವಾಗಿದೆ ಎನ್ನುತ್ತಾರೆ ಅನಿಂದಿತ್. ■